## <u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ. ಎಫ್.ಸಿ ನ್ಯಾಯಾಲಯ ಆಳಂದ</u>

## <u>ಸಿ.ಸಿ. ನಂ. 5784/2023</u>

ಫಿರ್ಯಾದಿ ಕರ್ನಾಟಕ ಸರ್ಕಾರದ ಪರ
ಪಿ.ಎಸ್.ಐ ಮಾದನ ಹಿಪ್ಪರಗ ಪೋಲಿಸ್ ಠಾಣೆ

ವಿರುದ್ಧ

ಆರೋಪಿತರು

1. ಸಿದ್ದಮ್ಮ ಗಂಡ ಮಲ್ಲಪ್ಪಾ @ ಮಲ್ಲಿನಾಥ ಕೋಚಿ,
   ವಯಃ 58ವರ್ಷ, ಉಃ ಕೂಲಿ ಕೆಲಸ,
   ಸಾಃ ಝುಳಕಿ (ಕೆ) ಗ್ರಾಮ, ತಾಃ ಆಳಂದ, ಜಿಃ ಕಲಬುರಗಿ.
2. ಅಮೃತ ತಂದೆ ಮಲ್ಲಪ್ಪಾ @ ಮಲ್ಲಿನಾಥ ಕೋಚಿ,
   ವಯಃ 30ವರ್ಷ, ಉಃ ಕೂಲಿ ಕೆಲಸ,
   ಸಾಃ ಝುಳಕಿ (ಕೆ) ಗ್ರಾಮ, ತಾಃ ಆಳಂದ, ಜಿಃ ಕಲಬುರಗಿ.
3. ಅಭಿಷೇಕ ತಂದೆ ಮಲ್ಲಪ್ಪಾ @ ಮಲ್ಲಿನಾಥ ಕೋಚಿ,
   ವಯಃ 23ವರ್ಷ, ಉಃ ಕೂಲಿ ಕೆಲಸ,
   ಸಾಃ ಝುಳಕಿ (ಕೆ) ಗ್ರಾಮ, ತಾಃ ಆಳಂದ, ಜಿಃ ಕಲಬುರಗಿ.
4. ರಾಧಿಕ ಗಂಡ ಅಭಿಷೇಕ ಕೋಚಿ,
   ವಯಃ 20ವರ್ಷ, ಉಃ ಕೂಲಿ ಕೆಲಸ,
   ಸಾಃ ಝುಳಕಿ (ಕೆ) ಗ್ರಾಮ, ತಾಃ ಆಳಂದ, ಜಿಃ ಕಲಬುರಗಿ.
5. ಲಕ್ಷ್ಮೀ ಗಂಡ ಅಮೃತ ಕೋಚಿ,
   ವಯಃ 26ವರ್ಷ, ಉಃ ಕೂಲಿ ಕೆಲಸ,
   ಸಾಃ ಝುಳಕಿ (ಕೆ) ಗ್ರಾಮ, ತಾಃ ಆಳಂದ, ಜಿಃ ಕಲಬುರಗಿ.

### <u>ದಂಡ ಪ್ರಕ್ರೀಯಾ ಸಂಹಿತೆ ಕಲಂ 313 ರ ಅಡಿ ಆರೋಪಿಗಳ ಹೇಳಿಕೆ</u>

ಪ್ರಶ್ನೆ 1 ನ್ಯಾಯಾಲಯದ ಮುಂದೆ ಅಭಿಯೋಜನೆ ಪರವಾಗಿ ನಡೆದ ವಿಚಾರಣೆಯಲ್ಲಿ ಸಾಕ್ಷಿದಾರರು ಹೇಳಿರುವ ಹೇಳಿಕೆಯನ್ನು ಕೇಳಿರುವಿರಾ?

ಉತ್ತರಃ 1 ರಿಂದ 5ನೇ ಆರೋಪಿತರು.ಕೇಳಿರುತ್ತೇನೆ

ಪ್ರಶ್ನೆ 2. ಸಿ.ಡಬ್ಲೂ. 1. ಪಿ.ಡಬ್ಲೂ. 3 **ಶರಣಮ್ಮ ತಂದೆ/ಗಂಡ ಗುಂಡಪ್ಪ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ಆರೋಪಿತರ ಪರಿಚಯ ಇರುತ್ತದೆ. ಚಾಸಾ-4 ಮಗ ಚಾಸಾ-2,3 ರವರ ಪರಿಚಯ ಇರುತ್ತದೆ. ಅಕ್ಟೋಬರ 7 ತಾರೀಖಿನಂದು ನಾನು ಕೆಳಗಡೆ ಕುಳಿತು ಬಾಂಡೆ ತಿಕ್ಕುವಾಗ 1 ನೇ ಜಆರೋಪಿಯು ಕಟ್ಟೆಯ ಮೇಲೆ ಕುಳಿತುಕೊಂಡು ನನಗೆ ಬಾಂಡೆ ತೋಳೆದ ನೀರನ್ನು ನಮ್ಮ ಮನೆಯ ಮುಂದೆ ಯಾಕೆ ಚೆಲ್ಲುತ್ತಿಯಾ ಎಂದು ಅವಾಚ್ಚವಾಗಿ ಬೈದು ನನಗೆ ಮತ್ತು ಅವರಿಗೆ ಬಾಯಿ ಬಾಯಿ ಆಯಿತು. ನಂತರ ಆರೋಪಿ ನಂ. 2 ನೇ ಆರೋಪಿಯು ಕಲ್ಲಿನಿಂದ ನನ್ನ ಎಡ ಪಕ್ಕೆಯ ಮೇಲೆ ಹೊಡೆದು ಗುಪ್ತ ಗಾಯಗೋಳಿಸಿರುತ್ತಾರೆ. ಆಗ ನಾನು

ಪ್ರಜ್ಞೆ ತಪ್ಪಿ ನೆಲದ ಮೇಲೆ ಬಿದ್ದಿದ್ದು ನಂತರ ನನ್ನನ್ನು ಎಳೆದು ಹೊಡೆದಿರುತ್ತಾನೆ. ನಂತರ ನನ್ನ ಸೀರೆ ಮತ್ತು ಕೂದಲನ್ನು ಹಿಡಿದು ಎಳೆದಾಡಿರುತ್ತಾರೆ. ನಂತರ ಚಾಸಾ-4 ರವರು ಬಂದು ಯಾಕೆ ನನ್ನ ತಾಯಿಗೆ ಹೊಡೆಯುತ್ತಿದ್ದಿರಿ ಎಂದದಾಗ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾರೆ. ನಂತರ ಚಾಸಾ-4 ರವರು ಊರಿನಲ್ಲಿ ಪಂಚಾಯಿತಿ ಮಾಡೋಣಾ ಎಂದು ಹೋಗಿರುತ್ತಾರೆ. ಪಂಚರು ಆರೋಪಿತರು ನಾವು ಹೇಳಿದ ಮಾತು ಕೇಳುವುದಿಲ್ಲ ಆದ್ದರಿಂದ ನೀವು ಏನು ಕ್ರಮ ತೆಗೆದುಕೊಳುತ್ತೀರೋ ತೆಗೆದುಕೊಳ್ಳಿ ಎಂದು ಹೇಳಿದ್ದರಿಂದ ನಾವು ಆಸ್ಪತ್ರೆಗೆ ಹೋಗಿ ನಂತರ ಪೋಲಿಸ್ ಠಾಣೆ ಹೋದಾಗ ಪೋಲಿಸರು ನಮಗೆ ಆಸ್ಪತ್ರೆಗೆ ಹೋಗಲು ತಿಳಿಸಿದ್ದರಿಂದ ಬೇರೆ ಆಸ್ಪತ್ರೇಗೆ ಹೋಗಿರುತ್ತೇವೆ. ಮತ್ತೆ ಠಾಣೆಗೆ ಹೋಗಿ ದೂರು ದಾಖಲಿಸಿರುತ್ತೇನೆ. ಎಂದು ಸಾಕ್ಷಿ ನುಡಿದಿರುತ್ತಾರೆ, ನೀವೇನು ಹೇಳುತ್ತೀರಿ ?

ಉತ್ತರಃ 1 ರಿಂದ 5ನೇ ಆರೋಪಿತರು. ಸುಳ್ಳು

ಪ್ರಶ್ನೇ 3- ಸಿ.ಡಬ್ಲೂ.4. ಪಿ. ಡಬ್ಲೂ. 4, **ರಾಜಕುಮಾರ ತಂದೆ/ಗಂಡ ದುಂಡಪ್ಪ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ಆರೋಪಿತರ ಪರಿಚಯ ಇರುತ್ತದೆ. ಚಾಸ-1 ನನ್ನ ತಾಯಿ, ಚಾಸಾ-2 ಮತ್ತು 3 ರವರ ಪರಿಚಯ ಇರುತ್ತದೆ. ದಿನಾಂಕಃ 04-08-2023 ರಂದು ಸಾಯಂಕಾಲ 4 ರಿಂದ 5.00 ಗಂಟೆಗೆ ಸುಮಾರಿಗೆ ನಾನು ಜಮೀನಿಗೆ ಹೋಗಿದ್ದು ಮರಳಿ ಸಾಯಂಕಾಲ 07.00 ಗಂಟೆ ಸಮಾರಿಗೆ ಮನೆಗೆ ಬಂದಾಗ ನನ್ನ ತಾಯಿಗೆ ಕಲ್ಲಿನಿಂದ ಹೊಡೆದಿದ್ದರು ನನಗೆ ಹೊಡೆಯುತ್ತೇವೆ ಎಂದು ಬೇದರಿಕೆ ಹಾಕಿರುತ್ತಾರೆ ನತಂರ ನಾವು ದೂರನ್ನು ದಾಖಲಿಸಿರುತ್ತೇವೆ. ಆರೋಪಿತರು ಮುಸರೆ ನೀರನ್ನು ಚೆಲ್ಲುವ ಸಲುವಾಗಿ ಯಾವಾಗಲೂ ಜಗಳ ಮಾಡುತ್ತಾರೆ., ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?.

ಉತ್ತರಃ 1 ರಿಂದ 5ನೇ ಆರೋಪಿತರು. ಸುಳ್ಳು

ಪ್ರಶ್ನೆ 4- ಸಿ.ಡಬ್ಲೂ.7, ಪಿ. ಡಬ್ಲೂ. 7 **ಮಲ್ಲೇಶ ತಂದೆ ಶಿವಪ್ಪಾ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ನಾನು 2020 ರಿಂದ 2024 ರವರೆಗೆ ಮಾದನಹಿಪ್ಪರಗಾ ಪೋಲಿಸ್ ಠಾಣೆಯಲ್ಲಿ ಎ.ಎಸ್. ಐ ಅಂತಾ ಕರ್ತವ್ಯ ನಿರ್ವಹಿಸಿರುತ್ತೇವೆ. ದಿಃ 30.08.2023 ರಂದು 06.00 ಗಂಟೆಗೆ ನಾನು ಠಾಣಾಧಿಕಾರಿಯ ಕರ್ತವ್ಯದಲ್ಲಿದ್ದಾಗ ಚಾಸಾ-1ರವರು ಠಾಣೆಗೆ ಬಂದು ದೂರು ನೀಡಿದ ಮೇರೆಗೆ ಗುನ್ನ ಸಂಖ್ಯೆ 46/2023 ಅಂತಾ ಪ್ರಕರಣ ದಾಖಲಿಸಿಕೊಂಡು ನಂತರ ಪ್ರ.ವ.ವರದಿಯನ್ನು ನಮ್ಮ ಸಿಬ್ಬಂದಿ ಮುಖಾಂತರ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ದಿಃ 31.08.2023 ರಂದು ಗುನ್ನಾ ಸ್ಥಳಕ್ಕೆ ಬೇಟಿ ಕೊಟ್ಟು ಪಂಚನಾಮೆಯ ಸಲುವಾಗಿ ಚಾಸ-2 ಮತ್ತು 3 ರವರನ್ನು ಬರಮಾಡಿಕೊಂಡು ಅವರ ಸಮಕ್ಷಮ ಪಂಚನಾಮೆಯನ್ನು ಮಾಡಿ ಒಂದು ಹಿಡಿ ಗಾತ್ರದ ಕಲ್ಲನ್ನು ಜಪ್ತಿಪಡಿಸಿಕೊಂಡು ಬೆ. 09.00 ರಿಂದ 10.00 ಗಂಟೆಯವರೆಗೆ ಪಂಚನಾಮೆಯನ್ನು ಮಾಡಿರುತ್ತೇನೆ. ಅದೇ ದಿನ ಚಾಸ-4ರವರ ಹೇಳಿಕೆ ಮತ್ತು ಚಾಸಾ-5ರವರ ಕೆಡಯಿಂದ ಕಲಂ 61ಬಿ ಅಡಿಯಲ್ಲಿ ವರದಿ ಮತ್ತು ಭಾವಚಿತ್ರವನ್ನು

ಪಡೆದುಕೊಂಡಿರುತ್ತೇನೆ. ದಿಃ 20.09.2023 ರಂದು ಮುಂದಿನ ತನಿಖೆಗಾಗಿ ಚಾಸಾ-8 ರವರಿಗೆ ಕಡತವನ್ನು ಸಲ್ಲಿಸಿರುತ್ತೇನೆ. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ?

ಉತ್ತರಃ 1 ರಿಂದ 5ನೇ ಆರೋಪಿತರು. ಸುಳ್ಳು

ಪ್ರಶ್ನೆ 5- ಸಿ.ಡಬ್ಲ್ಯೂ.8, ಪಿ. ಡಬ್ಲ್ಯೂ. 6 ರವರು ಆದ **ದಿನೇಶ ತಂದೆ ತಮ್ಮಯ್ಯಾ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ನಾನು ದಿಃ 18.08.2023 ಲರಿಂದ ದಿಃ 07.08.2024 ರವರೆಗೆ ಮಾದನಹಿಪ್ಪರಗಾ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ 20.09.2023 ರಂದು ಚಾಸಾ-7ರವರ ಕಡೆಯಿಂದ ಈ ಪ್ರಕಾರಣದಲ್ಲಿ ಕಡತವನ್ನು ಪಡೆದು ತನಿಖೆ ಕೈಗೊಂಡು ಅದೇ ದಿನ ಆರೋಪಿತರು ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡು ಬಂದು ಹಾಜರಾದ ಕಾರಣ ಅವರನ್ನು ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿಃ 22.09.2023 ರಂದು ಗಾಯದ ಪ್ರಮಾಣ ಪತ್ರವನ್ನು ಕಲಬುರಗಿ ಜಿಲ್ಲಾ ಆಸ್ಪತ್ರೆಯಪಿಂದ ಪಡೆದುಕೊಂಡಿರುತ್ತೇನೆ. ಅದೇ ದಿನ ತನಿಖೆ ಪೂರ್ಣಗೊಂಡ ಕಾರಣ ಆರೋಪಿತರ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ 1 ರಿಂದ 5ನೇ ಆರೋಪಿತರು. ಸುಳ್ಳು

ಪ್ರಶ್ನೆ 6- ಸಿ.ಡಬ್ಲ್ಯೂ.6, ಪಿ. ಡಬ್ಲ್ಯೂ. 7 ರವರು ಆದ **ಡಾ. ಶರಣಬಸವ ತಂದೆ ಬಸವರಾಜ** ಅವರು ತಮ್ಮ ನುಡಿ ಸಾಕ್ಷಿಯಲ್ಲಿ ನಾನು ಸೆಪ್ಟಂಬರ 2016 ರಿಂದ ಇಲ್ಲಿಯವರೆಗೆ ಜಿಮ್ಸ್ ಆಸ್ಪತ್ರೆ ಕಲಬುರಗಿಯಲ್ಲಿ ವೈದ್ಯಾಧಿಕಾರಿ ಅಂತಾ ಕೆಲಸ ಮಾಡುತ್ತಿದ್ದೇನೆ. ದಿಃ 05.08.2023 ಬೆಳಿಗ್ಗೆ ಸಮಾರು 10.40 ಗಂಟೆಗೆ ಚಾಸಾ-1ರವರು ಹಲ್ಲೆಯ ಹಿನ್ನಲೆ ಮೇಲೆ ಆಸ್ಪತ್ರೆಗೆ ಬಂದಿದ್ದರು. ಸದರಿ ಅವರನ್ನು ಪರೀಕ್ಷಿಸಿ ನೋಡಿದಾಗ ಅವರಿಗೆ ಈ ಕೆಳಕಂಡಂತೆ ಗಾಯಗಳು ಕಂಡು ಬಂದಿರುತ್ತವೆ.

1. ಎದೆಯ ಮೇಲೆ ಒಳಪೆಟ್ಟು ಮುಟ್ಟಿ ನೋಡಿದಾಗ ನೋವು ಇತ್ತು.
2. ಬಲಗೈ ಮುಂಗೈ ಮೇಲೆ ಒಳಪೆಟ್ಟು ಇದ್ದು ಮುಟ್ಟಿ ನೋಡಿದಾಗ ನೋವು ಇತ್ತು.
3. ಬೆನ್ನಿನ ಹಿಂಭಾಗದಲ್ಲಿ ಒಳಪೆಟ್ಟು ಇದ್ದು ಮುಟ್ಟಿ ನೋಡಿದಾಗ ನೋವು ಇತ್ತು.

ಸದರಿ ಚಾಸ-1ರವರನ್ನು ಎರಡು ದಿನ ಆಸ್ಪತ್ರೆಯಲ್ಲಿ ದಾಖಲು ಮಡಿಕೊಂಡು ಎದೆಯ ಎಕ್ಸರೇ ಮತ್ತು ಹೊಟ್ಟೆಯ ಅಲ್ಟ್ರಾಸೌಂಡ ಸ್ಕ್ಯಾಯನ್ ಮಾಡಿ ನೋಡಲಾಗಿ ಎಲ್ಲವು ಸರಿಯಾಗಿ ಇತ್ತು. ನನ್ನ ಪ್ರಕಾರ 1 ರಿಂದ 3 ನೇ ಗಾಯಗಳು ಸಾದಾ ಗಾಯಗಳು ಆಗಿರುತ್ತವೆ. ಈ ರೀತಿ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ 1 ರಿಂದ 5ನೇ ಆರೋಪಿತರು. ಸುಳ್ಳು

ಪ್ರಶ್ನೆ 7- ನೀವು ಏನನ್ನಾದರೂ ಹೇಳ ಬಯಸುವಿರಾ?

ಉತ್ತರಃ 1 ರಿಂದ 5ನೇ ಆರೋಪಿತರು. ಏನು ಇಲ್ಲ

ಪ್ರಶ್ನೆ 8- ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಮಾಡುವಿರಾ?

ಉತ್ತರಃ 1 ರಿಂದ 5ನೇ ಆರೋಪಿತರು. ಇಲ್ಲ

(ಮೇಲೆ ಹೇಳಲಾದ ಪ್ರಶ್ನೆಗಳನ್ನು 1 ರಿಂದ 5ನೇ ಆರೋಪಿತರಿಗೆ ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಅವನು ತಿಳಿದುಕೊಂಡು ಕೊಟ್ಟ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಳ್ಳಲಾಗಿದೆ ಎಂದು ಧೃಡೀಕರಿಸಲಾಗಿದೆ.)

ಸಿ.ಸಿ. ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ನ್ಯಾಯಾಲಯ.